
ಕವಿತೆ

# ಜನ ಮಾತನಾಡಲಿಲ್ಲ




ಅವಳು ಅಲಂಕರಿಸಿಕೊಂಡು
ಬಾಗಿಲಲ್ಲಿ ನಿಂತಳು
ಜನ ವಯ್ಯಾರಿ, ಸುಪ್ಪನಾತಿ
ಎಂದೆಲ್ಲ ಮೂದಲಿಸಿದರು,
ಅವಳು ಬೀದಿಯಲಿ ಬಂದಾಗ
ಅವಳ ಇತಿಹಾಸವನ್ನೇ
ಜಗಿ ಜಗಿದು ಅವಳತ್ತಲೇ
ಉಗುಳಿದರು!

ಅವಳ ಮನೆಗೊಬ್ಬ ಗಂಡಸು
ಬಂದು ಹೋಗುವಾಗ,
ಇಂಥ ಹೊಲಸು ಹೆಂಗಸು
ಇಲ್ಲಿರಬಾರದಿತ್ತೆಂದರು.
ಅವಳಿಗೆ ಇನ್ನೊಬ್ಬಳ ಗಂಡ
ಕಾಸಿನ ಸರ ಕೊಟ್ಟಾಗ
ಮನೆಮುರುಕಿ
ಎಂದು ಮೂತಿ ತಿವಿದರು!

ಅವಳು ಬಸುರಾದಳು
ಥೆ ಥೆ ಇದಕ್ಕೆ ಮಗು ಬೇರೆ
ಕೇಡು, ಮಾನಗೇಡಿ
ಎಂದು ಕುಹಕವಾಡಿದರು,
ಅವಳ ಕೂಸು ಹುಟ್ಟಿತು
ಕಂಡ ಕಂಡಲ್ಲೆಲ್ಲ
ಸೂಳೆ ಮಗನೆಂದೇ ಕರೆದು
ಅಣಕವಾಡಿ ನಕ್ಕರು!

ಅವಳು ಕಾಯಿಲೆ ಬಿದ್ದಳು
ಹಾಸಿಗೆ ಹಿಡಿದಳು,
ಸಂಪಾದನೆ ಶೂನ್ಯವಾಯಿತು
ಯಾರೂ ಮಾತನಾಡಲಿಲ್ಲ!
ಅವಳ ಕಂದ ಹಸಿವಿನಿಂದ
ಕಸದ ತೊಟ್ಟಿಯಲ್ಲಿ
ಹಳಸಿದನ್ನ ಆಯ್ದು ತಿಂದ
ಆಗಲೂ ಜನ ಸುಮ್ಮನಿದ್ದರು!

ಅವಳ ಮನೆ ಮಾಲೀಕ
ಬಾಡಿಗೆ ಕೊಡಲಿಲ್ಲೆಂದು
ತಾಯಿ ಮಗುವ ಹೊರತಳ್ಳಿದ.
ರಸ್ತೆ ಬದಿಯ ಮರದಡಿ
ನಿತ್ರಾಣಳಾಗಿ ಬಿದ್ದಿದ್ದಳು
ಮೂಳೆ ಚಕ್ಕಳವೇ ಆಗಿದ್ದ
ಮಗು ತಾಯಿಗಂಟಿ ಕುಳಿತಿತ್ತು
ಎಲ್ಲರೂ ನಿಂತು ನೋಡಿದರು!

ರಾತ್ರಿಯಿಡಿ ಸುರಿದ ಮಳೆ
ಶೀತದಿಂದ, ಹಸಿವಿನಿಂದ
ಅವಳು, ಅವಳ ಮಗು
ಬೀದಿ ಹೆಣವಾದರು!
ಶವದ ಗಾಡಿ
ಕೃಶ ದೇಹಗಳ ಹೊತ್ತೊಯ್ದಿತ್ತು
ಆಗಲೂ ಜನ ಒಂದೂ
ಮಾತನಾಡಲಿಲ್ಲ!

● ಶ್ರುತಿ ಬಿ.ಆರ್.